ಓ.ಎಸ್. ನಂಃ 546/2022
ಡಿ.ಡಬ್ಲ್ಯೂ-2 (ತೀರ್ಥಪ್ಪ)

ದಿನಾಂಕ: 14-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ</u>**

ನಾನು 10ನೇ ತರಗತಿವರೆಗೆ ವಿದ್ಯಾಭಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆಯಲ್ಲಿ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಗುದ್ಲಿ ಇವರು ವಡೇರ ಇವರ ಮೇಲೆ ಹಾಕಿರುತ್ತಾರೆ. ಗುದ್ಲಿಯವರು ತಾವು ಹೊಲ ಖರೀದಿ ಮಾಡಿದ್ದಾಗಿ ಹೇಳಿ ಈ ದಾವೆ ಮಾಡಿದ್ದಾರೆ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನೊಟೀಸು ಬಂದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ.

2. ಸಾಕ್ಷಿ ನುಡಿಯಲು ಬರುವುದಕ್ಕಿಂತ ಮೊದಲು ದಾಖಲೆಗಳನ್ನು ನೋಡಿರುತ್ತೇನೆ. ದುಡ್ಡು ಕೊಡುವಾಗ ಮಾಡಿದ ಕಾಗದವನ್ನು ನಾನು ನೋಡಿದ್ದೇನೆ. ಆ ಕಾಗದ ರೂ.8,50,000/- ಕ್ಕೆ ಮಾಡಿರುತ್ತಾರೆ. ಸದರಿ ಕಾಗದವನ್ನು ರದ್ದು ಮಾಡಲು ಬಂದಾಗ ನೋಡಿದ್ದೇನೆ. ಯಾವುದೇ ಕಾಗದ ಮಾಡುವಾಗ ಆ ಕಾಗದದಲ್ಲಿ ಹೆಸರಿರುವರೆಲ್ಲರೂ ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ. ನಾವು ರದ್ದತಿ ಮಾಡಲು ಬಂದ ಕಾಗದಲ್ಲಿ ಸೋಮಣ್ಣಾ ವಡೇರ, ರಾಮಣ್ಣಾ ವಡೇರ, ಲಕ್ಷ್ಮಣ ವಡೇರ, ಅವಣ್ಣಾ ವಡೇರ, ಅಮಸಿದ್ದ ವಡೇರ ಇವರುಗಳ ಹೆಸರು ಇದ್ದವು. ರದ್ದತಿ ಕಾಗದದಲ್ಲಿ ಸೋಮಣ್ಣಾ ವಡೇರ, ಅವಣ್ಣಾ ವಡೇರ, ಅಮಸಿದ್ದ ವಡೇರ ಇವರುಗಳ ಸಹಿ ಇರಲಿಲ್ಲ. ಕಾಗದ ಮಾಡಿದಾಗ

ಅದರಲ್ಲಿ ಹೆಸರುಗಳು ಬರೆದ ಬ್ಯಕ್ತಿಗಳು ಹಾಜರಿದ್ದಾಗ ಅವರ ಸಹಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ.

3. ರದ್ದತಿ ಪತ್ರ ಮಾಡುವಾಗ ಸೋಮಣ್ಣಾ ವಡೇರ, ರಾಮಣ್ಣಾ ವಡೇರ, ಲಕ್ಷ್ಮಣ ವಡೇರ, ಅವಣ್ಣಾ ವಡೇರ, ಅಮಸಿದ್ದ ವಡೇರ ಇವರುಗಳು ಇದ್ದರು. ರದ್ದತಿ ಪತ್ರವು 2020ರಲ್ಲಿ ಆಗಿದೆ ಆದರೆ ನನಗೆ ದಿನಾಂಕ ಗೊತ್ತಿಲ್ಲ. ಸದರಿ ರದ್ದತಿ ಪತರಕ್ಕೆ ಸೋಮಣ್ಣಾ ವಡೇರ, ರಾಮಣ್ಣಾ ವಡೇರ, ಲಕ್ಷ್ಮಣ ವಡೇರ, ಅವಣ್ಣಾ ವಡೇರ, ಅಮಸಿದ್ದ ವಡೇರ ಇವರೆಲ್ಲರು ಸಹಿ ಮಾಡಿರುತ್ತಾರೆ. 3ನೇ ಪ್ರತಿವಾದಿ ರಾಮಪ್ಪ ನನ್ನ ಗೆಳೆಯ ಎಂದರೆ ಸರಿ. ನಾನು ಹೇಳಿರುವ ರದ್ದತಿ ಪತ್ರ ನಿಡಿ-10 ಇರುತ್ತದೆ. ನಿಡಿ-10ರಲ್ಲಿ ಪ್ರತಿವಾದಿ 3, ಉದ್ದಪ್ಪ ಲಾಡಿ, ಅಜ್ಜಪ್ಪ ವಡೇರ, ನನ್ನದು, ಕಲ್ಮೇಶ ವಡೇರ ಇವರುಗಳ ಸಹಿಗಳು ಇವೆ. ಸದರಿ ರದ್ದತಿ ಪತ್ರ ನಿಡಿ-10ಕ್ಕೆ ಸೋಮಣ್ಣಾ ವಡೇರ, ರಾಮಣ್ಣಾ ವಡೇರ, ಲಕ್ಷ್ಮಣ ವಡೇರ, ಅವಣ್ಣಾ ವಡೇರ, ಅಮಸಿದ್ದ ವಡೇರ ಇವರುಗಳ ಸಹಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ವಾದಿಯ ಸಹಿಯು ಸಹ ಇರುವುದಿಲ್ಲ ಎಂದರೆ ಸರಿ.

4. ನಾನು, ಉದ್ದಪ್ಪ ಲಾಡಿ, ಕಲ್ಮೇಶ ವಡೇರ ಇವರುಗಳು ಯಾವಾಗಲು ಕೂಡಿ ಇರುತ್ತೇವೆ ಎಂದರೆ ಸರಿ. ಲಕ್ಷ್ಮಣ ವಡೇರ ಇವರು ಯಾವ ದಿನಾಂಕದಂದು ತೀರಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಲಕ್ಷ್ಮಣ ವಡೇರ ಇವರಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದ್ದರಿಂದ ಮೃತಪಟ್ಟಿರುತ್ತಾರೆ. ಲಕ್ಷ್ಮಣ ವಡೇರ ಇವರಿಗೆ ಅವರು ತೀರಿಕೊಳ್ಳುವುದಕ್ಕಿಂತ 3-4 ವರ್ಷ ಮೊದಲಿನಿಂದಲು ಲಿವರ್

ಸಮಸ್ಯೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಣ ವಡೇರ ಇವರು ಸಾಕಷ್ಟು ಕಡೆ ಚಿಕಿತ್ಸೆ ಪಡೆದಿದ್ದರು ಮತ್ತು ಚಿಕಿತ್ಸೆಗಾಗಿ ಸಾಕಷ್ಟು ಹಣ ಖರ್ಚು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ಲಕ್ಷ್ಮಣ ವಡೇರ ಇವರಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದ್ದರಿಂದ ಅವರ ಚಿಕಿತ್ಸೆಯ ಖರ್ಚಿಗಾಗಿ ಸರ್ವೆ ನಂ.50 ರ ಪೈಕಿ 01ಎಕರೆ ಜಮೀನನ್ನು ಮಾರಾಟ ಮಾಡಲು ತೆಗೆದಿದ್ದರು ಎಂದರೆ ನನಗೆ ಗೊತ್ತಿಲ್ಲ. 2018 ರಲ್ಲಿ ಮಾರುತಿ ಚಿಗಡೊಳ್ಳಿ ಇವರಿಗೆ ಸರ್ವೆ ನಂ.50 ರ 01ಎಕರೆ ಜಮೀನನ್ನು ರೂ.5,00,000/- ಮಾರಾಟ ಮಾಡಲು ಒಪ್ಪಿ ಒಂದು ನೋಂದಾಯಿತ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮಾರುತಿ ಚಿಗಡೊಳ್ಳಿ ಇವರಿಗೆ ಸರ್ವೆ ನಂ.50 ರ 01ಎಕರೆ ಜಮೀನು ಮಾರಾಟ ಮಾಡಲು ಪ್ರತಿವಾದಿ 2, 3 ಮತ್ತು ಮೃತ ಲಕ್ಷ್ಮಣ ಹೆಚ್ಚಿನ ದುಡ್ಡು ಕೇಳಿದ್ದರು ಎಂದರೆ ಸರಿಯಲ್ಲ. ಹೆಚ್ಚಿನ ದುಡ್ಡು ಕೊಡಲು ಆಗುವುದಿಲ್ಲ ಎಂದಿದ್ದಕ್ಕೆ ಖರೀದಿ ವ್ಯವಹಾರ ರದ್ದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 2, 3 ಮತ್ತು ಮೃತ ಲಕ್ಷ್ಮಣ ಇವರು ಮಾರುತಿ ಚಿಗಡೊಳ್ಳಿ ಇವರಿಗೆ ವಾಪಸ ದುಡ್ಡು ಕೊಡಬೇಕಾಗಿದ್ದರಿಂದ ಬೇರೆಯವರಿಂದ ದುಡ್ಡು ಪಡೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

6. 1ನೇ ಪ್ರತಿವಾದಿಗೆ ಕೇವಲ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಹೆಣ್ಣು ಮಕ್ಕಳ ಪೈಕಿ ಒಬ್ಬರನ್ನು ಮಲಕಾರಿ ವಡೇರ ಅಂದರೆ ಪಿ.ಡಬ್ಲ್ಯೂ-2 ಇವರ ಸಹೋದರರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ

ಸರಿ. 1ನೇ ಪ್ರತಿವಾದಿಗೆ ವಯಸ್ಸಾಗಿದೆ ಎಂದರೆ ಸರಿ. ಅವರ ಇಬ್ಬರು ಹೆಣ್ಣು ಮಕ್ಕಳು ತಮ್ಮ ತಮ್ಮ ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಗೆ ವಯಸ್ಸಾಗಿದ್ದರಿಂದ ದುಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದ್ದರಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

7. 8ನೇ ಪ್ರತಿವಾದಿ  ಅಮಸಿದ್ದ ಇವರ ಆರ್ಥಿಕ ಪರಿಸ್ಥಿತಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.50ರಲ್ಲಿ 01ಎಕರೆ ಜಮೀನು 8ನೇ ಪ್ರತಿವಾದಿಗೆ, ಇನ್ನು 01ಎಕರೆ ಜಮೀನು 1ನೇ ಪ್ರತಿವಾದಿಗೆ ಹಾಗೂ ಪ್ರತಿವಾದಿ 2, 3 ಮತ್ತು ಮೃತ ಲಕ್ಷ್ಮಣ ಇವರಿಗೆ 01ಎಕರೆ ಜಮೀನು ಇದೆ ಎಂದರೆ ಎಲ್ಲರು ಕೂಡಿಯೇ ಇರುತ್ತಾರೆ ಎಂದು ಹೇಳುತ್ತಾರೆ.

8. ಪ್ರತಿವಾದಿ 2, 3 ಮತ್ತು ಮೃತ ಲಕ್ಷ್ಮಣ ಇಮ್ಮ ಕುಟುಂಬದ ಅಡಚಣೆಗಾಗಿ ಸರ್ವೆ ನಂ.50 ರಲ್ಲಿಯ 02ಎಕರೆ ಜಮೀನು 2020ರಲ್ಲಿ ಮಾರಾಟ ಮಾಡಲು ತೆಗೆದಿದ್ದರು ಎಂದರೆ ಸರಿಯಲ್ಲ. ಮಾತುಕತೆ ಸಮಯದಲ್ಲಿ ಪ್ರತಿವಾದಿ 2, 3 ಮತ್ತು ಮೃತ ಲಕ್ಷ್ಮಣ ಸದರಿ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ವಾದಿಗೆ ಮಾರಾಟ ಮಾಡುವ ಉದ್ದೇಶದಿಂದ ವಾದಿಯಿಂದ ರೂ.15,00,000/- ಪಡೆದು ಪ್ರತಿವಾದಿ 1 ರಿಂದ 3, ಮೃತ ಲಕ್ಷ್ಮಣ ಹಾಗೂ ಪ್ರತಿವಾದಿ 8 ಇವರೆಲ್ಲರೂ ಸೇರಿ ವಾದಿಯ ಹೆಸರಿಗೆ ಒಂದು ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ

ಸದರಿ ಖರೀದಿ ಕರಾರು ಪತ್ರಕ್ಕೆ ಮಲಕಾರಿ ವಡೇರ, ಶಂಕರ ಮುತ್ತೆಪ್ಪ ವಡೇರ, ಸಿದ್ದಪ್ಪ ಕರೆಪ್ಪ ಕಳ್ಳಿಗುದ್ದಿ ಇವರುಗಳು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ ದಾಖಲೆ ನೋಂದಾದ ದಾಖಲೆ ಎಂದರೆ ಸರಿ.

9. ಖರೀದಿ ಕರಾರ ಪತ್ರದಲ್ಲಿ ಪೈಪಲೈನ ಹಾಕಲು ಬಡ್ಡಿಯ ಮೇಲೆ ರೂ.8,50,000/- ತೆಗೆದುಕೊಂಡಿದ್ದಾರೆ ಎಂದು ಖರೀದಿ ಕರಾರ ಪತ್ರ ನಿಪಿ-1 ರಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿ-1ನ್ನು ನೋಂದಣಿ ಮಾಡುವಾಗ ಪ್ರತಿವಾದಿಯರು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ಮಾರಾಟ ಮಾಡಲು ಒಪ್ಪಿ ಬರೆದುಕೊಟ್ಟಿಲ್ಲ ಎಂದು ಪ್ರತಿವಾದಿ 1 ರಿಂದ 3 ಮತ್ತು ಮೃತ ಲಕ್ಷ್ಮಣ ಉಪ-ನೋಂದಣಿ ಅಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

10. ಯಾವತ್ತೂ ಪ್ರತಿವಾದಿಯರು ವಾದಿಯಿಂದ ರೂ.8,50,000/- ಸಾಲ ಪಡೆಯದೇ ಇದ್ದರೂ ಸಹ ಪ್ರತಿವಾದಿ 3 ನನ್ನ ಸ್ನೇಹಿತರಾಗಿದ್ದರಿಂದ 3ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲದ ಮೊತ್ತ ರೂ.8,50,000/-ಕ್ಕೆ ಬಡ್ಡಿ ಸೇರಿಸಿ ಒಟ್ಟು ರೂ.16,00,000/- ಕೊಟ್ಟಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಗೆ ದುಡ್ಡು ವಾಪಸ್ ಕೊಡುವಂತಹ ಪ್ರಸಂಗ ಯಾವತ್ತೂ ಬಂದಿಲ್ಲ ಎಂದರೆ ಸರಿಯಲ್ಲ.

11. ವಾದಿಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ ನಾನು ಪ್ರತಿವಾದಿ 3 ರವರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-10 ಮತ್ತು 11ನ್ನು ನಾವು ಸುಳ್ಳು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನನ್ನ ಸ್ನೇಹಿತನಾಗಿದ್ದರಿಂದ 3ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ